# ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ

**ಕಲಂ 4 (1)(ಬಿ)(ii) ಮಾಹಿತಿ ಹಕ್ಕು ಕಾಯ್ದೆ 2005: ಅಧಿಕಾರಿಗಳು ಮತ್ತು ಸಿಬ್ಬಂದಿಗಳ ಅದಿಕಾರಗಳು ಮತ್ತು ಕರ್ತವ್ಯಗಳು**

**ವ್ಯವಸ್ಥಾಪಕ ನಿರ್ದೇಶಕರು**

ವ್ಯವಸ್ಥಾಪಕ ನಿರ್ದೇಶಕರು ಸಂಸ್ಥೆಯ ಮುಖ್ಯಸ್ಥರಾಗಿದ್ದು ಸಂಸ್ಥೆಯ ಎಲ್ಲಾ ಕಾರ್ಯ ಚಟುವಟಿಕೆಗಳನ್ನು ರಾಜ್ಯ ಹಾಗೂ ಕೇಂದ್ರ ಸರ್ಕಾರದ ಕಾರ್ಯ ನೀತಿ ಮತ್ತು ಭಾರತೀಯ ಸಣ್ಣ ಕೈಗಾರಿಕಾಭಿವೃದ್ಧಿ ಬ್ಯಾಂಕ್ ಸೇರಿದಂತೆ ಇತರ ಅಂಗಸಂಸ್ಥೆಗಳ ಮತ್ತು ನಿರ್ದೇಶಕ ಮಂಡಳಿಯು ಸಾಲ ಮಂಜೂರಾತಿ, ವಿತರಣೆ ಮತ್ತು ವಸೂಲಾತಿಯ ನೀತಿ ಹಾಗೂ ಗುರಿಗಳನ್ನು ಸಾಧಿಸುವ ನಿಟ್ಟಿನಲ್ಲಿ ಮತ್ತು ಸಂಸ್ಥೆಯ ಎಲ್ಲಾ ಕಾರ್ಯಗಳಲ್ಲಿ ಅನುಸರಿಸಬೇಕಾದ ಕ್ರಮಗಳ ಬಗ್ಗೆ ವ್ಯವಸ್ಥಾಪಕ ನಿರ್ದೇಶಕರ ಮಾರ್ಗದರ್ಶನವಿರುತ್ತದೆ.

**ಕಾರ್ಯ ನಿರ್ವಾಹಕ ನಿರ್ದೇಶಕರು**

ಸಂಸ್ಥೆಯ ಒಟ್ಟಾರೆ ಕಾರ್ಯ ಚಟುವಟಿಕೆಯಲ್ಲಿ ವ್ಯವಸ್ಥಾಪಕ ನಿರ್ದೇಶಕರಿಗೆ ಸಹಾಯ ಹಾಗೂ ನಿರ್ದೇಶಕ ಮಂಡಳಿ ಮತ್ತು ವ್ಯವಸ್ಥಾಪಕ ನಿರ್ದೇಶಕರು ತೆಗೆದುಕೊಂಡ ತೀರ್ಮಾನಗಳನ್ನು ಕಾರ್ಯಗತಗೊಳಿಸುವುದು ಮತ್ತು ಸಂಸ್ಥೆಯ ಪ್ರಧಾನ ವ್ಯವಸ್ಥಾಪಕರುಗಳು, ಉಪ ಪ್ರಧಾನ ವ್ಯವಸ್ಥಾಪಕರುಗಳು ಮತ್ತು ಪ್ರಧಾನ ಕಛೇರಿಯಲ್ಲಿನ ಸಹಾಯಕ ಪ್ರಧಾನ ವ್ಯವಸ್ಥಾಪಕರು / ಶಾಖಾ ಹಾಗೂ ವಿಭಾಗ ಮುಖ್ಯಸ್ಥರುಗಳಿಗೆ ಸಂಸ್ಥೆಯ ಕಾರ್ಯ ಚಟುವಟಿಕೆಗಳ ರೂಪು ರೇಷೆಯನ್ವಯ ಮಾರ್ಗದರ್ಶನ ನೀಡುವುದು.

**ಪ್ರಧಾನ ವ್ಯವಸ್ಥಾಪಕರು (ವೃತ್ತಗಳು)**

ಸಂಬಂಧಿಸಿದ ಶಾಖಾ ಕಛೇರಿಗಳ ಕಾರ್ಯಾಚರಣೆಯ ಮೇಲ್ವಿಚಾರಣೆ ವಹಿಸುವುದು, ವ್ಯವಸ್ಥಾಪಕ ನಿರ್ದೇಶಕರ, ಕಾರ್ಯ ನಿರ್ವಾಹಕ ನಿರ್ದೇಶಕರ ಆದೇಶ ಹಾಗೂ ಸಂಸ್ಥೆಯ ಕಾರ್ಯ ಸೂಚಿಗಳಂತೆ ಕಾರ್ಯ ನಿರ್ವಹಿಸುವುದು.

**ಪ್ರಧಾನ ವ್ಯವಸ್ಥಾಪಕರು (ಆಂತರಿಕ ಪರಿಶೋಧನೆ)**

ಸಂಸ್ಥೆಯ ಲೆಕ್ಕಪರಿಶೋಧನೆಯ ಮುಖ್ಯಸ್ಥರಾಗಿದ್ದು, ಲೆಕ್ಕಪರಿಶೋಧನಾ ತಂಡಗಳ ಷರಾಗಳ ಹಾಗೂ ಪರಿಶೋಧನೆಯ ಆಯಾಮಗಳನ್ನು ಸಂಸ್ಥೆಯ ಹಿತದೃಷ್ಟಿಯಂತೆ ಹಾಗೂ ಕಾರ್ಯ ಸೂಚಿಯಂತೆ ಕ್ರಮ ವಹಿಸಲು ನಿಗಾ ವಹಿಸುವುದು ಮತ್ತು ಅಂತರಿಕ ಪರಿಶೋಧನೆಯ ವರದಿ ಮತ್ತು ನೀಡುವ ಸಮಜಾಯಿಸಿಗಳ ಬಗ್ಗೆ ಹಿರಿಯ ಅಧಿಕಾರಿಗಳು, ಕಾರ್ಯ ನಿರ್ವಾಹಕ ನಿರ್ದೇಶಕರು ಹಾಗೂ ವ್ಯವಸ್ಥಾಪಕ ನಿರ್ದೇಶಕರ ಕಾರ್ಯ ಸೂಚಿ ಅನುಗುಣವಾಗಿ ನಿರ್ದೇಶನ ನೀಡುವುದು.

**ಉಪ ಪ್ರಧಾನ ವ್ಯವಸ್ಥಾಪಕರು, ಸಹಾಯಕ ಪ್ರಧಾನ ವ್ಯವಸ್ಥಾಪಕರು, ವ್ಯವಸ್ಥಾಪಕರು**

ಸಂಸ್ಥೆಯ ಶಾಖಾ ಕಛೇರಿಗಳ ಹಾಗೂ ಪ್ರಧಾನ ಕಛೇರಿಯಲ್ಲಿ ನಿಯಂತ್ರಣ, ಸಿಬ್ಬಂದಿ ಮತ್ತು ಆಡಳಿತ, ಮಾಹಿತಿ ತಂತ್ರಜ್ಞಾನ, ಬಿ.ಡಿ & ಸಿ.ಆರ್, ಎಂ.ಐ.ಎಸ್ ಒಳಗೊಂಡಂತೆ ಇತರೆ ವಿಭಾಗಗಳ ಮುಖ್ಯಸ್ಥರಾಗಿ ಸಂಧರ್ಬಾನುಸಾರ ಕಾರ್ಯ ನಿರ್ವಹಿಸಲಿದ್ದು, ಮೇಲಧಿಕಾರಿಯವರ ಮಾರ್ಗ ನಿರ್ದೇಶನದಂತೆ ಸಂಸ್ಥೆಯ ಪುರೂಭಿವೃದ್ಧಿಗಾಗಿ ಕಾರ್ಯ ನಿರ್ವಹಿಸಲಿದ್ದಾರೆ.